ಬದುಕಗೊಡದ ನಗರ ಒಡ್ಡುವ ತಲ್ಲಣಗಳನ್ನು ಸೆರೆ ಹಿಡಿದಿದೆ ಎಂದೆನಿಸಿದರೆ, ಇನ್ನೊಮ್ಮೆ, ಕರುಣೆಯುಳ್ಳ ಮನುಷ್ಯನೊಬ್ಬ ಒತ್ತಡಗಳಿಗೆ ಸೋತು ಮೃಗವಾಗುವ ರೂಪಾಂತರವನ್ನು ಸೆರೆ ಹಿಡಿದಿದೆ ಎನಿಸುತ್ತದೆ. ಮತ್ತೊಮ್ಮೆ, ಗಂಭೀರ ಸಮಸ್ಯೆಯೊಂದಕ್ಕೆ ಮಹಿಳೆ ಮತ್ತು ಪುರುಷ ಯಾವ ರೀತಿ ಸ್ಪಂದಿಸುತ್ತಾರೆ ಎಂಬುದನ್ನು ಮನೋವೈಜ್ಞಾನಿಕ–ಸಾಮಾಜಿಕ ದೃಷ್ಟಿಯಿಂದ ಸಿನಿಮಾ ಚರ್ಚಿಸುತ್ತಿದೆ ಎಂದೂ ಎನಿಸುತ್ತದೆ. ಒಟ್ಟಿನಲ್ಲಿ ಆಧುನಿಕ ಜೀವನದ ಒತ್ತಡಗಳಿಗೆ ಮತ್ತು ಆತಂಕಗಳಿಗೆ ಕನ್ನಡಿ ಹಿಡಿದಂತಿರುವ ಈ ಸಿನಿಮಾದ ಆಶಯವನ್ನು ಜಗತ್ತಿನ ಯಾವದೇ ನಗರಕ್ಕೂ ವಿಸ್ತರಿಸಬಹುದು ಮತ್ತು ಅದನ್ನು ಸುಲಭವಾಗಿ ಹಾಗೆ ಅನ್ವಯಿಸಿಕೊಳ್ಳಲು ಸಾಧ್ಯವಾಗಿಸುವುದು ಕೂಡ ಇದರ ಹೆಗ್ಗಳಿಕೆ.

ಅಕ್ಕಪಕ್ಕದ ನಿವಾಸಿಗಳಿಗೆ ಸದಾ ಸಹಾಯಹಸ್ತ ಚಾಚುವ(ಅಪಾರ್ಟ್‌ಮೆಂಟ್ ಬಿರುಕು ಬಿಟ್ಟಾಗ, ತನ್ನ ಜೀವದ ಹಂಗು ತೊರೆದು, ನೆರಮನೆಯ ಅಂಗವಿಕಲನೊಬ್ಬನನ್ನು ರಕ್ಷಿಸುವುದು), ತಾನು ಶಿಕ್ಷಕನಾಗಿರುವ ಶಾಲೆಯ ಮಕ್ಕಳೊಂದಿಗೆ ಗೆಳೆಯರಂತೆ ಬೆರೆಯುವ, ಅವರಿಗೆ ಅತಿ ಸಲುಗೆಯಿಂದ ಪಾಠಗಳನ್ನು, ಜೀವನಪಾಠಗಳನ್ನು ಕಲಿಸುವ, ಅವರ ತಪ್ಪುಗಳನ್ನು ಮನ್ನಿಸುವ, ಅಮೆರಿಕಾದ ನಾಟಕಕಾರ ಆರ್ಥರ್ ಮಿಲ್ಲರ್‌ನ 'ಡೆತ್ ಆಫ್ ಎ ಸೇಲ್ಸ್ ಮ್ಯಾನ್' ನಾಟಕ ತಂಡದಲ್ಲಿ ಸೇಲ್ಸ್ ಮ್ಯಾನ್ ವಿಲ್ಲಿ ಪಾತ್ರ ನಿರ್ವಹಿಸುತ್ತಿರುವ ಸ್ನೇಹಜೀವಿ ಎಮಾದ್. ಅದೇ ನಾಟಕ ತಂಡದಲ್ಲಿ ವಿಲ್ಲಿಯ ಪತ್ನಿ ಲಿಂಡಾ ಪಾತ್ರವನ್ನು, ಎಮಾದ್‌ನ ಪತ್ನಿ ರಾಣ ನಿರ್ವಹಿಸುತ್ತಿರುತ್ತಾಳೆ. ಮನೆ ಬಿರುಕುಬಿಟ್ಟ ಕಾರಣ, ಬೇರೆ ಮನೆಯನ್ನು ಬಾಡಿಗೆ ಹಿಡಿಯುವುದಕ್ಕೆ ಈ ದಂಪತಿಗೆ ತೊಂದರೆಗಳಿರುತ್ತವೆ. ಅಂತಹ ಸಮಯದಲ್ಲಿ ನಾಟಕ ತಂಡದ ಸದಸ್ಯ ಬಾಬಕ್‌ನ ಪ್ರೀತಿಯ ಒತ್ತಾಸೆಗೆ ಮಣಿದು, ಅವನ ಒಡೆತನದ ಮನೆಯಲ್ಲಿ ವಾಸಿಸಲು ಶುರುಮಾಡುತ್ತಾರೆ. ಆ ಮನೆಯ ಹಿಂದಿನ ಬಾಡಿಗೆದಾರನ ಬಹುತೇಕ ದಿನಬಳಕೆ ಸಾಮಾನುಗಳು ಅಲ್ಲಿಯೇ ಉಳಿದಿರುವುದು, ಅವುಗಳನ್ನು ಹಿಂದಕ್ಕೆ ಒಯ್ಯುವುದಕ್ಕೆ ಅವರು ಹೆಚ್ಚಿನ ಸಮಯಾವಕಾಶ ಕೋರುವುದು, ಅವುಗಳ ರಕ್ಷಣೆಯ ಹೊಣೆ ಕೂಡ ಇವರ ಮೇಲೆ ಬೀಳುವುದು – ಹೀಗೆ ಹಲವು ಸಮಸ್ಯೆಗಳು ತಲೆದೋರುತ್ತವೆ. ಆದರೆ ಇವೆಲ್ಲಕ್ಕೂ ಮೀರಿದ ಒಂದು ಸಮಸ್ಯೆ ಈ ದಂಪತಿಯ ವೈಯಕ್ತಿಕ ಜೀವನ ಮತ್ತು ಆತ್ಮೀಯ ಸಂಬಂಧದ ಮೇಲೆ ಗಾಢ ಪರಿಣಾಮ ಬೀರುವುದಲ್ಲದೆ, ಅವರ ಜೀವನವನ್ನು ಅಲ್ಲೋಲಕಲ್ಲೋಲಗೊಳಿಸುತ್ತದೆ.

ಒಂದು ದಿನ ನಾಟಕ ಪ್ರದರ್ಶನದಿಂದ ಎಮಾದ್‌ಗಿಂತಲೂ ಮೊದಲೇ ರಾಣ ಮನೆಗೆ ಹಿಂದಿರುಗಿದ್ದಾಳೆ. ಮನೆಯ ಕರೆಘಂಟೆ ಬಾರಿಸಿದಾಗ, ಪತಿಯ ಆಗಮನದ ನಿರೀಕ್ಷೆಯಲ್ಲಿದ್ದ ರಾಣ, ವಿಚಾರಿಸದೆ ಬಾಗಿಲು ತೆಗೆಯುವುದು, ಆಗಂತುಕನ ಆಗಮನ ಮತ್ತು ಮುಂದಿನ ದುರ್ಘಟನೆಗೆ ಎಡೆಮಾಡಿಕೊಡುತ್ತದೆ. ತಲೆಗೆ ಪೆಟ್ಟಾಗಿ ಆಸ್ಪತ್ರೆ ಸೇರುವ ರಾಣ, ಗುಣಮುಖಳಾದ ಮೇಲೆ ತನಗೊದಗಿದ ಟ್ರಾಮಾದಿಂದ, ದಿನನಿತ್ಯದ ಕೆಲಸಗಳಿಂದ ತುಸು ವಿಚಲಿತಳಾಗುತ್ತಾಳೆ. ಭಯದ ಭಾವನೆ ಬೀಡುಬಿಡುತ್ತದೆ. ಇದನ್ನೆಲ್ಲ ಮತ್ತೆ ಪೊಲೀಸರ ಮುಂದೆ ಹೇಳಲು ಹಿಂಜರಿದು, ದೂರು ನೀಡಲು ನಿರಾಕರಿಸುತ್ತಾಳೆ. ಆಘಾತಕಾರಿ ಘಟನೆ ನಡೆದ ಬಚ್ಚಲ ಮನೆಯಲ್ಲಿ ಮತ್ತೆ ಸ್ನಾನ ಮಾಡಲು ಹೆದರುತ್ತಾಳೆ. ಬಾಡಿಗೆಗೆ ಬೇರೆ ಮನೆ ಹುಡುಕುವಂತೆ ಪತಿಗೆ ದುಂಬಾಲು ಬೀಳುತ್ತಾಳೆ. ಹೀಗೆ ಹೆಚ್ಚಿನ ಒತ್ತಡಗಳಿಗೆ ತುತ್ತಾಗುವ ಎಮಾದ್‌ನ ಶಾಂತಚಿತ್ತದ, ಕ್ಷಮಾರ್ಹ, ಅರ್ಥ ಮಾಡಿಕೊಳ್ಳುವ ಗುಣ ಕ್ಷೀಣಿಸುತ್ತಾ ಬದಲಾವಣೆಯ ಜಾಡು ಹಿಡಿಯುತ್ತದೆ. ಈ ಬದಲಾವಣೆಯನ್ನು ನಿರ್ದೇಶಕರು ಬಹಳ ನಾಜೂಕಾಗಿ, ಸೂಕ್ಷ್ಮವಾಗಿ ಮತ್ತು